ಚಲನವಲನಗಳು ಹೇಗಿರಬಹುದು ಎಂದು ವಿವರ ಕಲೆ ಹಾಕಿ ಹೇಳು. ಆ ಹುಡುಗಿಯ ಶಾಲೆ ಅಥವಾ ಕಾಲೇಜ್‌ನಲ್ಲಿ ಕೂಡಾ ವಿಚಾರಿಸು, ಮನೆಯವರಿಗೆ ತಿಳಿಯದಂತೆ ಈಗಿನ ಮಕ್ಕಳು ಪ್ರೀತಿ ಪ್ರೇಮ ಎಂದೆಲ್ಲ ಕನಸು ಕಟ್ಟಿಕೊಂಡಿರುತ್ತಾರೆ.'

'ಸರ್, ಆ ಹುಡುಗಿ ಯಾವ ಶಾಲೆಗೂ ಹೋಗುತ್ತಿರಲಿಲ್ಲವಂತೆ... ಅವಳು ಮನೆಯಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದಳಂತೆ.'

ಒಂದು ಕ್ಷಣ ಪೂಜಾರಿಗೆ ಆಶ್ಚರ್ಯವಾಯ್ತು. ಈಗಿನ ಕಾಲದ ಹುಡುಗಿ ಶಾಲೆಗೂ ಹೋಗುತ್ತಿಲ್ಲ ಎಂದರೆ?...

'ಇದೇನೋ ವಿಚಿತ್ರವಾಗಿದೆ ಜಗದೀಶ, ಆ ಹುಡುಗಿಯ ಫೋಟೊ ನೋಡಿದರೆ ಮಾಡರ್ನ್ ಆಗಿ ಕಾಣಿಸುತ್ತಾಳೆ. ಆದರೆ ಮೊಬೈಲ್ ಬಳಸುತ್ತಿರಲಿಲ್ಲ... ವಿದ್ಯಾಭ್ಯಾಸವನ್ನೂ ಮಾಡುತ್ತಿರಲಿಲ್ಲ... ಇರುವುದು ಅಕ್ಕ ಭಾವನ ಮನೆಯಲ್ಲಿ... ಏನೊ ಕನೆಕ್ಟ್ ಆಗ್ತಾ ಇಲ್ಲ... ಸರಿ, ಕಿಡ್ನಾಪ್ ಆ್ಯಂಗಲ್‌ನಿಂದ ತನಿಖೆ ಪ್ರಾರಂಭಿಸು. ಸದಾನಂದ ಮತ್ತು ಅವನ ಪತ್ನಿಯ ಜಾತಕ ತೆಗೆಸು. ಅವರಿಗೆ ಯಾರಾದರೂ ಶತ್ರುಗಳಿದ್ದಾರಾ... ಎಲ್ಲಿಯಾದರೂ ಸಾಲ ಮಾಡಿ ತೀರಿಸಿಲ್ಲವಾ... ಮೊಬೈಲ್ ಕಂಪನಿಯಿಂದ ಈ ಸದಾನಂದನ ಫೋನ್ ವಿವರಗಳನ್ನು ತಿಳಿದುಕೊಂಡು ರಿಪೋರ್ಟ್ ಮಾಡು' ಎಂದ ಪೂಜಾರಿ. ಜಗದೀಶನಿಗೆ ಈ ರೀತಿಯ ಕೇಸ್‌ಗಳಲ್ಲಿ ತನಿಖೆ ಹೇಗೆ ನಡೆಸಬೇಕು, ಎಲ್ಲಿಂದ ಪ್ರಾರಂಭಿಸಬೇಕು ಎಂಬ ಬಗ್ಗೆ ಹೇಳುತ್ತಿದ್ದ. ಅವರಿಬ್ಬರೂ ಇನ್ನೂ ಮಾತಾಡುತ್ತಿರುವಾಗಲೇ ಸದಾನಂದ ಓಡಿಬಂದು ಏದುಸಿರು ಬಿಡುತ್ತಾ, 'ಸರ್, ನನ್ನ ನಾದಿನಿ ಸಿಕ್ಕಿದಳು... ಈಗ ಕೆಲ ಸಮಯದ ಕೆಳಗೆ ಫೋನ್ ಮಾಡಿದ್ದಳು. ಈಗ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಬಸ್ ನಿಲ್ದಾಣದಲ್ಲಿ ಇದ್ದಾಳಂತೆ... ನಮ್ಮ ಅತ್ತೆ ಮಾವನ ಬಳಿ ಹೋಗುತ್ತಿದ್ದಾಳಂತೆ... ಅವರು ಅಲ್ಲಿಂದ ಸುಮಾರು ಅರವತ್ತು ಕಿಲೋಮೀಟರ್ ದೂರದ ರಾಜಂ ಪೇಟೆ ಎನ್ನುವ ಊರಿನವರು... ಈಗ ಅವಳು ಸಿಕ್ಕಿದ್ದಾಳೆ, ಹಾಗಾಗಿ ನಾವು ನೀಡಿದ್ದ ದೂರು ವಾಪಸ್ ತೆಗೆದುಕೊಳ್ಳುತ್ತೇವೆ. ನನ್ನ ನಾದಿನಿಯ ಫೋಟೊ ವಾಪಸ್ ನೀಡಿ...' ಎಂದ.

ಅವನ ಈ ಮಾತುಗಳಿಂದ ಜಗದೀಶ ಸ್ವಲ್ಪ ಕಸಿವಿಸಿಗೊಂಡ. ಅವನ ವೃತ್ತಿಜೀವನದ ಪ್ರಥಮ ಕೇಸ್! ಇನ್ನೂ ಸರಿಯಾಗಿ ತನಿಖೆ ಕೂಡ ಆರಂಭಿಸಿಲ್ಲ... ಆಗಲೇ ಕೇಸ್ ಕ್ಲೋಸ್ ಆಗುವ ಹಾದಿಯಲ್ಲಿದೆ... ಅದನ್ನು ತೋರ್ಪಡಿಸದೇ, 'ಕ್ಲೋಸ್ ಮಾಡಕ್ಕೆ ಕೆಲವು ಕ್ರಮಗಳಿವೆ. ಹಾಗೆಲ್ಲ ನೀವು ಹೇಳಿದ ಕೂಡಲೇ ಕ್ಲೋಸ್ ಮಾಡಕ್ಕೆ ಆಗಲ್ಲ... ಆ ಹುಡುಗಿ ಅವಳ ಅಪ್ಪ ಅಮ್ಮನ ಬಳಿ ಹೋಗಿ ಸೇರಿದ್ದಾಳೆ ಎಂದು ಗೊತ್ತಾದ ಮೇಲೆ ನಾವೇ ಕೇಸ್ ಕ್ಲೋಸ್ ಮಾಡ್ತೇವೆ' ಎಂದ.

ತನ್ನ ಸೀಮಿತ ಅನುಭವದಿಂದ ಜಗದೀಶ ಹೀಗೆ ಹೇಳಿದ. ಅವನ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ಸದಾನಂದ ಇರಲಿಲ್ಲ.

'ಸರ್, ನಮ್ಮ ಹುಡುಗಿ ಸಿಕ್ಕಿದ್ದಾಳೆ... ನನ್ನ ಕಂಪ್ಲೇಂಟ್ ವಾಪಸ್ ತೆಗೆದುಕೊಂಡರೆ ಆಯ್ತಲ್ಲವಾ... ಇನ್ಯಾಕೆ ತನಿಖೆ, ಹೇಳಿಕೆ ಎಲ್ಲಾ?...' ಎಂದ.

ಅಲ್ಲಿಯವರೆಗೂ ತನಗೂ ಅಲ್ಲಿ ನಡೆಯುತ್ತಿರುವ ಸಂಭಾಷಣೆಗೂ ಸಂಬಂಧವೇ ಇಲ್ಲ ಅನ್ನುವಂತೆ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಳ್ಳುತ್ತಿದ್ದ ಪೂಜಾರಿ, 'ನಮ್ಮ ಕೆಲಸ ನಮಗೆ ಗೊತ್ತಿದೆ. ನೀವು ಹೇಳಿಕೆ ಕೊಟ್ಟು ಹೋಗಿ... ಆ ಹುಡುಗಿ ಕ್ಷೇಮವಾಗಿ ತಲುಪಿದ್ದಾಳೆ ಅಂತ ನಮಗೆ ಗೊತ್ತಾಗಬೇಕು' ಎಂದು ಗದರಿದ. ಸದಾನಂದ ಹೋದ ಸ್ವಲ್ಪ ಸಮಯದ ನಂತರ ಪೂಜಾರಿಯನ್ನು ಮತ್ತೆ ಚರ್ಚೆಗೆಳೆದ ಜಗದೀಶ.